**ಮರು ಪ್ರಮಾಣೀಕರಿಸಲಾದ ದಿನಾಂಕ : 06.07.2026.**

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಸ್.ಎಸ್ ವಕೀಲರಿಂದ</u> :-**

ನಾನು ಇಟ್ಟಿಗೆ ಕಾರ್ಖಾನೆಯ ಮೇಲೆ ದಾವೆಯನ್ನು ಹೂಡಿದ್ದೇನೆ ಎಂದು ಹೇಳಲಾಗಿದ್ದು ಅದರ ವಿಸ್ತೀರ್ಣವು 9 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಎರಡು ಇಟ್ಟಿಗೆ ಕಾರ್ಖಾನೆಗಳು ಇರುತ್ತವೆ, ಅದರಲ್ಲಿ ಒಂದು ನಮ್ಮದು ಮತ್ತೊಂದು ಪ್ರತಿವಾದಿಯರದ್ದು ಎಂದು ನುಡಿಯುತ್ತಾರೆ. ಆ ಎರಡೂ ಕಾರ್ಖಾನೆಯು ಒಂದೇ ಸಲ ಆಗಿರುತ್ತದೆ ಎಂದರೆ ಸರಿ. ನಮ್ಮ ಕಾರ್ಖಾನೆಯಲ್ಲಿ ಮಷೀನರಿ ಇರುವುದಿಲ್ಲ. ಆದರೆ ಪ್ರತಿವಾದಿಯ ಕಾರ್ಖಾನೆಯಲ್ಲಿ ಮಷೀನರಿ ಇರುವುದಾಗಿ ನುಡಿಯುತ್ತಾರೆ. ಕಾರ್ಖಾನೆಯನ್ನು ನಡೆಸುವುದಕ್ಕೆ ಪರವಾನಗಿಯನ್ನು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ, ನನ್ನ ಅಳಿಯನವರಿಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನಮ್ಮಲ್ಲಿ ಯಾವ ಕೆಲಸದ ಆಳು ಇರುವುದಿಲ್ಲ, ನನ್ನ ಮಗಳು ಹಾಗೂ ಅಳಿಯ ಮಾಡುತ್ತಾರೆ. ನಾನು ಪ್ರತಿವಾದಿಯ ಕಾರ್ಖಾನೆಗೆ ಹೋಗುವುದಿಲ್ಲ, ಏಕೆಂದರೆ ನನಗೆ ನಡೆಯಲು ಆಗುವುದಿಲ್ಲ. ಪೂರ್ವದ ಕಡೆ ಇಟ್ಟಿಗೆಯನ್ನು ಸುಡುತ್ತಾರೆ, ಪಶ್ಚಿಮದ ಕಡೆ ಅದನ್ನು ತಯಾರು ಮಾಡುತ್ತೇವೆ. ಒಂದೊಂದು ಬಾರಿ ಇಟ್ಟಿಗೆಯನ್ನು ಸುಡುತ್ತೇವೆ, ಇಲ್ಲವಾದಲ್ಲಿ ಅದೇ ರೀತಿ ಸುಡದೇ ಹಸಿ ಇಟ್ಟಿಗೆಯನ್ನೇ ಮಾರುತ್ತೇವೆ. ತಿಂಗಳಿಗೆ ಎಷ್ಟು

ಇಟ್ಟಿಗೆಯನ್ನು ತಯಾರು ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಹಾಗೂ ಪ್ರತಿವಾದಿಯ ಜಮೀನಿನ ಅಳತೆಯು ಒಂದೇ ಆಗಿರುತ್ತದೆ ಎಂದರೆ ಸರಿ. ಖಿಲಾನ್ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮಗಳು ಹಾಗೂ ಅಳಿಯನವರನ್ನು ಈ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ. ಎರಡೂ ಕಾರ್ಖಾನೆಯ ನಡುವೆ ಏನಿದೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಮಗಳು ಹಾಗೂ ಅಳಿಯ ಸುಮಾರು 20 ವರ್ಷಗಳಿಂದ ಇಟ್ಟಿಗೆಯನ್ನು ಮಾಡುತ್ತಿದ್ದೇವೆ. ನಾನು ಕಾರ್ಖಾನೆಯಾದ ಬಳಿಕ ಅಲ್ಲಿಗೆ ಹೋಗಿಲ್ಲ, ಆ ಹಿಂದೆ ಹೋಗಿರುತ್ತೇನೆ. ಕಾರ್ಖಾನೆಯಾಗುವ ಮುನ್ನ ಎರಡರ ಮಧ್ಯ ಭಾಗದಲ್ಲಿ ಬದು ಇತ್ತು. ಸದರಿ ಬದು ಈಗ ಇಲ್ಲ, ಎರಡು ಒಂದೇ ಜಾಗದಲ್ಲಿ ಇದೆ ಎಂದರೆ ಸರಿ. ಕಾರ್ಖಾನೆಯಾದ ಸಮಯದಿಂದಲೂ ಬದು ಇರುವುದಿಲ್ಲ. ನನ್ನ ಪತಿಯ ಹೆಸರು ವೆಂಕಟರಾಮಯ್ಯ ಆಗಿರುತ್ತದೆ. ನನಗೆ ಕಾರ್ಖಾನೆಯ ಬಗ್ಗೆ ಹಾಗೂ ಅದರ ಪರವಾನಗಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನನ್ನ ಗಂಡನವರಿಗೆ ಓದು ಮತ್ತು ಬರಹ ಬರುತ್ತಿತ್ತು ಎಂದರೆ ಸರಿ. ಅವರು ರುಜುವನ್ನು ಮಾತ್ರ ಹಾಕುತ್ತಿದ್ದರು ಎಂದರೆ ಸರಿ. ಪ್ರತಿವಾದಿಯು ನಿಮ್ಮ, ನಿಮ್ಮ ಮಗಳು ಹಾಗೂ ಅಳಿಯನ ಮೇಲೆ ಒಂದು ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಅದರಲ್ಲಿ ಪ್ರತಿವಾದಿಗಳು ನಮಗೆ ಹೊಡೆದಿರುತ್ತಾರೆ ಎಂದು ತಕರಾರನ್ನು ಸಲ್ಲಿಸಿರುತ್ತೇವೆ. ಅದರಲ್ಲಿ ನಿಮ್ಮ ಮಗಳು ನ್ಯಾಯಾಲಯದ ಮುಂದೆ ಸಾಕ್ಷಿಯನ್ನು ನುಡಿದಿದ್ದಾರೆ ಎಂದರೆ ಸರಿ. ಅವರು ಹಾಕಿರುವ ದಾವೆಯು ಯಾವ ವಿಷಯಕ್ಕೆ ಎಷ್ಟು ವಿಸ್ತೀರ್ಣಕ್ಕೆ ಹೂಡಿದ್ದಾರೆ ಎಂಬುದು ನಾನು ತಿಳಿದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಆ ದಾವೆಯಲ್ಲಿ ಏನಾದರೂ ಮಾಡಿ ನಮ್ಮ ಇಟ್ಟಿಗೆ ಕಾರ್ಖಾನೆಯನ್ನು ಪಡೆದುಕೊಳ್ಳಬೇಕು ಎಂದು ದಾವೆಯನ್ನು ಹೂಡಿರುತ್ತಾರೆ. ಪ್ರತಿವಾದಿಗಳು ನಾವು ಓಡಾಡುವ ಜಾಗಕ್ಕೆ ಸೋಗೆಯನ್ನು ಹಾಕಿದ್ದು ಅದನ್ನು ತೆಗೆದುಕೊಳ್ಳಿ ಎಂದು ಹೇಳಿದಾಗ ಅವರು ದಾವೆಯನ್ನು ಹೂಡಿರುತ್ತಾರೆ. ಅದರ ಪೂರ್ವದಲ್ಲಿ ಯಾವುದೇ ವ್ಯಾಜ್ಯ ಇರಲಿಲ್ಲ ಎಂದರೆ ಸರಿ. ನಾವು ದಾವೆಯನ್ನು ಹೂಡಿದ ಬಳಿಕ ಅವರು ಸೋಗೆಯನ್ನು ಹಾಕಿ ತಕರಾರು ಮಾಡಿರುತ್ತಾರೆ. ನಾವು ತಯಾರು ಮಾಡಿದ ಇಟ್ಟಿಗೆಯನ್ನು ಮಾರಾಟ ಮಾಡಿರುತ್ತೇವೆ. ಅದನ್ನು ಮಾರಾಟ ಮಾಡಿರುವುದನ್ನು ತೋರಿಸುವುದಕ್ಕೆ ನನ್ನ ಮಗಳು ಹಾಗೂ ಅಳಿಯನನ್ನು ಕೇಳಬೇಕು. ನನ್ನ ಪತಿಯು ಮರಣ ಹೊಂದಿ 21 ವರ್ಷ

ಆಗಿದೆ. ಪ್ರತಿವಾದಿಯ ತಂದೆ ತೀರಿ ಹೋಗಿ ಎಷ್ಟು ವರ್ಷವಾಗಿದೆ ಎಂದು ನನಗೆ ತಿಳಿದಿಲ್ಲ. ಅವರ ತಂದೆ ಹಾಗೂ ನನ್ನ ಪತಿಯು ದೇವಸ್ಥಾನದ ಅರ್ಚಕರಾಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಸ್ವತ್ತು ದೇವರ ಜಮೀನು ಆಗಿದೆ ಎಂದು ನುಡಿಯುತ್ತಾರೆ. ಅದು ಶ್ರೀ ಹನುಮಂತರಾಯಪ್ಪ ದೇವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಅದಾದ ಬಳಿಕ ಅರ್ಚಕರು ಅನುಭವಿಸಿಕೊಂಡು ಬರುತ್ತಿದ್ದ ಜಮೀನುಗಳಂತೆ ಅವರವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ತಂದೆಗೆ 20 ಗುಂಟೆ ಪೈಕಿ 10 ಗುಂಟೆ ಜಮೀನು ಮಂಜೂರಾಗಿತ್ತು ಎಂದರೆ ಸರಿ. ಅದಾದ ಬಳಿಕ ನಿಮ್ಮ ಪತಿ ಹಾಗೂ ಪ್ರತಿವಾದಿಯ ತಂದೆಯವರು ವ್ಯವಸಾಯದ ಅನುಕೂಲಕ್ಕಾಗಿ ಜಮೀನನ್ನು ಅದಲು ಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮಗೆ 3 ಜಾಗದಲ್ಲಿ ಮಂಜೂರಾಗಿರುವ ಜಮೀನುಗಳು ಇರುತ್ತದೆ. ಪೂರ್ವಕ್ಕೆ ಗಂಗಮ್ಮ, ಪಶ್ಚಿಮಕ್ಕೆ ರಾಮಯ್ಯ, ಉತ್ತರಕ್ಕೆ ಬಸವಯ್ಯ, ದಕ್ಷಿಣಕ್ಕೆ ಮೂಡಲಪ್ಪ ಎಂಬಂತೆ ಚೆಕ್ಕುಬಂದಿಯು ಇರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಸುಮಾರು ವರ್ಷಗಳಿಂದ ನೀವೇ ಅನುಭವಿಸುತ್ತಿದ್ದೀರಿ ಎಂದರೆ ಸರಿ. ಅದರಂತೆ ಪ್ರತಿವಾದಿಗಳಿಗೂ ಸಹ ಮೂರು ಕಡೆ ಜಮೀನು ಮಂಜೂರಾಗಿದೆ ಎಂದರೆ ಸರಿ. ನಮ್ಮ ಕಾರ್ಖಾನೆಯ ಗುರುತು ಯಾವುದೂ ಇರುವುದಿಲ್ಲ. ಪ್ರತಿವಾದಿಗಳು ಮಾಡುತ್ತಿರುವ ಇಟ್ಟಿಗೆಗೆ ಗುರುತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು AHP ಎಂಬ ಗುರುತನ್ನು ಇಟ್ಟುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಗಂಡನವರ ಕಾಲದಲ್ಲೇ ಜಮೀನು ಅದಲು ಬದಲು ಆಗಿದ್ದು ಅದರಂತೆ ಅವರು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು ನಾವು ನಾವು ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕೀಲರು ಕೋರಿಕೊಂಡಿದ್ದರಿಂದ ಮುಂದೂಡಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**